# ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಹಿರಿಯೂರು

## ಸಿ.ಸಿ ಸಂಖ್ಯೆ: 715/2023

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಜಯಮ್ಮ | ಸಿಡಬ್ಲ್ಯೂ-3 |
| ತಂದೆಯ/ಗಂಡನ ಹೆಸರು | - | ಶಿವಣ್ಣ | ಪಿಡಬ್ಲ್ಯೂ-3 |
| ವಯಸ್ಸು | - | ಸು.50 ವರ್ಷ | ಪ್ರ.ವ.ಬೋ<br>ದಿನಾಂಕ:27.03.2025 |
| ಉದ್ಯೋಗ | - | ವ್ಯವಸಾಯ | |
| ವಾಸ | - | ನಾಗಪ್ಪನಹಳ್ಳಿ ಗ್ರಾಮ | |

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿಯವರಿಂದ:-**

1. ಚಾಸಾ-1 ನನ್ನ ತಮ್ಮ. ಚಾಸಾ-2 ನನ್ನ ಮಗಳು. ಚಾಸಾ-4 ರಿಂದ 6 ರವರು ನನ್ನ ಸಂಬಂಧಿಕರು. ಆರೋಪಿತರೆಲ್ಲರೂ ನಮ್ಮ ಸಂಬಂಧಿಕರು.

2. ಆರೋಪಿತರು ನಮಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ. 1 ನೇ ಆರೋಪಿ ಚಾಸಾ-1 ರವರಿಗೆ ಹಾರೆಕೋಲಿನಿಂದ ತಲೆಗೆ ಹೊಡೆದಿಲ್ಲ. 3 ನೇ ಆರೋಪಿತನು ಚಾಸಾ-2 ರವರ ಸೀರೆ ಹಿಡಿದು ಎಳೆದಾಡಿ, ಕೈ ಕಾಲುಗಳಿಂದ ಹೊಡೆದಿಲ್ಲ. 2 ರಿಂದ 8 ನೇ ಆರೋಪಿತರು ನನಗೆ ಮತ್ತು ಚಾಸಾ-4 ರವರಿಗೆ ಕೈ ಕಾಲುಗಳಿಂದ ಕೆಳಗೆ ಹಾಕಿ ತುಳಿದಿರುವುದಿಲ್ಲ. ಚಾಸಾ-5 ಮತ್ತು 6 ರವರು ಜಗಳವನ್ನು ಬಿಡಿಸಿರುವುದಿಲ್ಲ. ಆರೋಪಿತರು ನಮಗೆ ಪ್ರಾಣ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ಈ ವಿಚಾರವಾಗಿ ನಾನು ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿರುವುದಿಲ್ಲ. ಸಾಕ್ಷಿಯು ನೋಡಿ ಗುರುತಿಸಿದ ಕಲಂ.164(5)ಸಿ.ಆರ್.ಪಿ ಸಿ ಹೇಳಿಕೆಯನ್ನು **ನಿಪಿ-4** ಎಂದು ಅದರಲ್ಲಿನ ಸಾಕ್ಷಿಯ ಸಹಿಗಳನ್ನು **ನಿಪಿ-4(ಎ) ರಿಂದ (ಸಿ)** ಎಂದು ಗುರುತಿಸಲಾಯಿತು. (**ಸದರಿ ಕಲಂ.164(5)ಸಿ ಆರ್. ಪಿ ಸಿ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ಲಕೋಟೆಯಿಂದ ತೆಗೆಯಲಾಯಿತು.**)

3. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲುಗಳನ್ನು ನೋಡಿ ಗುರುತಿಸುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ-ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ-ಸವಾಲಿನಲ್ಲಿ ಕೇಳುವ ಪ್ರಶ್ನೆಗಳನ್ನು ಕೇಳಲು ಅನುಮತಿ ನೀಡಲಾಯಿತು).

**ಪಾಟೀ-ಸವಾಲುಃ ಮಾನ್ಯ ಎಪಿಪಿಯವರಿಂದಃ-**

1. ದಿಃ11.02.2023 ರಂದು ರಾತ್ರಿ 8.30 ರ ಸಮಯದಲ್ಲಿ ನಾನು ಮತ್ತು ಚಾಸಾ-1 ಹಾಗೂ 2 ಮತ್ತು 4 ರವರು ನಮ್ಮ ಮನೆಯ ಹತ್ತಿರ ಇರುವಾಗ ಆರೋಪಿತರು ನಮಗೆ ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿಯಲ್ಲ. 1 ನೇ ಆರೋಪಿ ಚಾಸಾ-1 ರವರಿಗೆ ಹಾರೆಕೋಲಿನಿಂದ ತಲೆಗೆ ಹೊಡೆದನು ಎಂದರೆ ಸರಿಯಲ್ಲ. 3 ನೇ ಆರೋಪಿತನು ಚಾಸಾ-2 ರವರ ಸೀರೆ ಹಿಡಿದು ಎಳೆದಾಡಿ, ಕೈ ಕಾಲುಗಳಿಂದ ಹೊಡೆದನು ಎಂದರೆ ಸರಿಯಲ್ಲ. 2 ರಿಂದ 8 ನೇ ಆರೋಪಿತರು ನನಗೆ ಮತ್ತು ಚಾಸಾ-4 ರವರಿಗೆ ಕೈ ಕಾಲುಗಳಿಂದ ಕೆಳಗೆ ಹಾಕಿ ತುಳಿದರು ಎಂದರೆ ಸರಿಯಲ್ಲ. ಆರೋಪಿತರು ನಮಗೆ ಪ್ರಾಣ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ಚಾಸಾ-5 ಮತ್ತು 6 ರವರು ಜಗಳವನ್ನು ಬಿಡಿಸಿದರು ಎಂದರೆ ಸರಿಯಲ್ಲ.

2. ಈ ವಿಚಾರವಾಗಿ ನಾನು ದಿಃ29.03.2023 ರಂದು ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದಂತೆ ದಿಃ14.02.2023 ರಂದು ಹೇಳಿಕೆ ನೀಡಿದ್ದರೂ, ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆ ಭಾಗವನ್ನು **ನಿಪಿ-5** ಎಂದು ಗುರುತಿಸಲಾಯಿತು.

3. ಆರೋಪಿತರೊಂದಿಗೆ ರಾಜಿ ಮಾಡಿಕೊಂಡಿದ್ದೇನೆ ಎಂದರೆ ಸರಿ. ಆ ಕಾರಣದಿಂದ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ–ಸವಾಲುಃ ಆರೋಪಿ ಪರ ಶ್ರೀ.ವೈ ಆರ್ ಕೆ ವಕೀಲರಿಂದಃ**

ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ಹಿರಿಯೂರು.